# ಉಷಾದೇವಿ

ಡಾ. ಶೈಲಜಾ ಆಮೂರ

ಸ್ವಾಮಿ ವಿವೇಕಾನಂದರು ಗುಜರಾತಿನ ಪೋರ್‌ಬಂದರ್‌ಗೆ ಎರಡು ಸಾರಿ ಭೇಟಿ ನೀಡಿದ್ದರು. ಸ್ವಾಮಿ ಶಿವಾನಂದರ ಹೇಳಿಕೆಯ ಪ್ರಕಾರ, ಸ್ವಾಮಿ ವಿವೇಕಾನಂದರು ಪೋರ್‌ಬಂದರಿನಲ್ಲಿ ವಾಸಿಸುತ್ತಿದ್ದ ಪಂಡಿತ ಶಂಕರ ಪಾಂಡುರಂಗರ ಭವ್ಯವಾದ ಹಾಗೂ ಸುಂದರವಾದ ಗ್ರಂಥಾಲಯದಿಂದ ತುಂಬ ಆಕರ್ಷಿತರಾಗಿದ್ದರು. ಅಲ್ಲದೆ ಪಂಡಿತ ಶಂಕರ ಪಾಂಡುರಂಗರು ಸ್ವಾಮೀಜಿಗೆ ಎಷ್ಟು ದಿನ ಬೇಕೋ ಅಷ್ಟು ದಿನ ತಮ್ಮ ಮನೆಯಲ್ಲಿದ್ದು ತಮ್ಮ ಗ್ರಂಥಾಲಯವನ್ನು ನಿರ್ಭಿಡೆಯಿಂದ ಉಪಯೋಗಿಸಿಕೊಳ್ಳುವಂತೆ ವಿನಂತಿಸಿಕೊಂಡಿದ್ದರು. ಇದಕ್ಕೆ ಒಪ್ಪಿಕೊಂಡಿದ್ದ ಸ್ವಾಮೀಜಿ ಅವರ ಮನೆಯಲ್ಲಿ ವಾಸವಾಗಿದ್ದಾಗ, ನೇರವಾಗಿ ಅವರನ್ನು ಕಾಣುವ ಹಾಗೂ ಅವರ ಸಾನ್ನಿಧ್ಯದಲ್ಲಿ ಬದುಕುವ ಸುಯೋಗ ಪಂಡಿತರ ಕುಟುಂಬದ ಎಲ್ಲಾ ಸದಸ್ಯರಿಗೂ ಲಭಿಸಿತ್ತು. ಹಾಗೆಯೇ ಶ್ರೀಮತಿ ಉಷಾದೇವಿ ಕೂಡ ಸ್ವಾಮಿ ವಿವೇಕಾನಂದರ ಸಾನಿಧ್ಯಲಾಭ ಪಡೆದ ಧನ್ಯ ಮಹಿಳೆ.

ಉಷಾದೇವಿ ಪಂಡಿತ ಶಂಕರರ ಎರಡನೆಯ ಹೆಂಡತಿ. ಅವರ ಮೊದಲನೆಯ ಹೆಂಡತಿ ತೀರಿಕೊಂಡ ಮೇಲೆ ಅವರು ಉಷಾದೇವಿಯನ್ನು ಮದುವೆಯಾಗಿದ್ದರು. ಉಷಾದೇವಿ ಜನಿಸಿದ್ದು ೧೮೫೬ನೆಯ ಇಸವಿಯಲ್ಲಿ. ಅವಳು ಸ್ವಾಮಿ ವಿವೇಕಾನಂದರನ್ನು ಭೇಟಿಯಾದಾಗ ಅವಳ ವಯಸ್ಸು ಮೂವತ್ತಾರು ಆಗಿತ್ತು. ಪಾಂಡುರಂಗ ಹಾಗೂ ಉಷಾದೇವಿ ದಂಪತಿಗಳಿಗೆ ಒಟ್ಟು ಐದು ಜನ ಮಕ್ಕಳಿದ್ದರು. ಲೌರಾ, ಕ್ಷಮಾ ಮತ್ತು ಭದ್ರಾ ಎಂಬ ಹೆಸರಿನ ಹೆಣ್ಣು ಮಕ್ಕಳು ಹಾಗೂ ಮಾಧವ ಮತ್ತು ವಾಮನ ಎಂಬ ಹೆಸರಿನ ಗಂಡು ಮಕ್ಕಳಿದ್ದರು. ಕ್ಷಮಾ ಮುಂದೆ ಸಂಸ್ಕೃತ, ಮರಾಠಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿಯನ್ನು ಪಡೆದು ಹಲವಾರು ಲೇಖನಗಳನ್ನು ಹಾಗೂ ಹಲವಾರು ಪುಸ್ತಕಗಳನ್ನು ಬರೆದು 'ಪಂಡಿತಾ ಕ್ಷಮಾ ರಾವ್' ಎಂಬ ಹೆಸರಿನಿಂದ ಹೆಸರುವಾಸಿಯಾದರು. ಅವರೇ ಸಂಸ್ಕೃತದಲ್ಲಿ ತಮ್ಮ ತಂದೆ ಪಂಡಿತ ಶಂಕರರ ಬಗ್ಗೆ ಬರೆದ 'ಶಂಕರ ಜೀವನ ಆಖ್ಯಾನಮ್' ಎಂಬ ಕೃತಿಯಲ್ಲಿ ಪಂಡಿತರ ಬಗ್ಗೆ, ತನ್ನ ತಾಯಿಯ ಬಗ್ಗೆ ಹಾಗೂ ಸ್ವಾಮಿ ವಿವೇಕಾನಂದರು ತಮ್ಮ ಮನೆಯಲ್ಲಿ ವಾಸ್ತವ್ಯ ಹೂಡಿದ್ದರ ಬಗ್ಗೆ ಎಲ್ಲ ವಿವರಗಳನ್ನೂ ನೀಡಿದ್ದಾರೆ.

ಪಾಂಡುರಂಗ ಪಂಡಿತರು ಪೋರ್‌ಬಂದರಿನ ಆಡಳಿತಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರ ಕೆಲಸ ಬಹಳ ಜವಾಬ್ದಾರಿಯದಾಗಿದ್ದರಿಂದ ಮನೆಯ ಕಡೆಗೆ ಹೆಚ್ಚು ಸಮಯ ಕೊಡುವುದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಉಷಾದೇವಿಯೇ ವಹಿಸಿಕೊಂಡಿದ್ದಳು. ಅವಳು



ತನ್ನ ಎಲ್ಲ ಮಕ್ಕಳಿಗೆ ಶಿಕ್ಷಣ ಕೊಡಿಸಲು ಬೇಕಾಗಿದ್ದ ಎಲ್ಲ ವ್ಯವಸ್ಥೆಯನ್ನೂ ಮಾಡಿದ್ದಳು. ಸ್ವಾಮೀಜಿಗೆ ಈ ಐದೂ ಜನ ಮಕ್ಕಳ ಮೇಲೆ ಅಪಾರ ಪ್ರೀತಿಯಿತ್ತು. ಎರಡನೆಯ ಮಗಳು ಕ್ಷಮಾ ಸಾಹಿತ್ಯ ಕ್ಷೇತ್ರದಲ್ಲಿ ಅಭಿರುಚಿ ಹೊಂದಿದವಳಾಗಿದ್ದು ಸಂಸ್ಕೃತ, ಮರಾಠಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಹಲವಾರು ಲೇಖನಗಳನ್ನು ಬರೆದು ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದಾಳೆ. ಅವಳ ಮಗಳು ಲೀಲಾರಾವ್ ದಯಾಲ್ ಕೂಡ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹೊಂದಿದ್ದಳು. ಕ್ಷಮಾ ರಾವ್ ಬರೆದಿದ್ದ 'ಶಂಕರ ಜೀವನ ಆಖ್ಯಾನಮ್' ಎಂಬ ಅಮೂಲ್ಯವಾದ ಗ್ರಂಥದ ಒಂದು ಪ್ರತಿ ಅವಳ ಮಗಳು ಲೀಲಾಳ ಸ್ವಂತದ ಗ್ರಂಥಾಲಯದಲ್ಲಿ ಜೋಪಾನವಾಗಿ ಇಡಲ್ಪಟ್ಟಿತ್ತು. ಇದನ್ನು ಶ್ರೀರಾಮಕೃಷ್ಣ ಆಶ್ರಮದ ಸಂನ್ಯಾಸಿ ಸ್ವಾಮಿ ನಿಖಿಲೇಶ್ವರಾನಂದರು ಪಡೆದು, ಸ್ವಾಮಿ ವಿವೇಕಾನಂದರು ಭೇಟಿ ನೀಡಿದ್ದ ಗುಜರಾತಿನ ಎಲ್ಲಾ ಸ್ಥಳಗಳನ್ನೂ ಸಂದರ್ಶಿಸಿ, ಬಹಳ ಆಳವಾಗಿ ಅಧ್ಯಯನ ಮಾಡಿ 'Swami Vivekananda in Gujarat' (ಗುಜರಾತಿನಲ್ಲಿ ಸ್ವಾಮಿ ವಿವೇಕಾನಂದರು) ಎಂಬ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಸ್ವಾಮಿ ವಿವೇಕಾನಂದರ ನೇರ ಸಂಪರ್ಕ ಪಡೆದಿದ್ದ ಪಂಡಿತ ಶಂಕರ ಪಾಂಡುರಂಗರ ಮನೆಯಲ್ಲಿ ಅವರಿದ್ದಾಗ ನಡೆದಿದ್ದ ಎಷ್ಟೋ ಕುತೂಹಲಕಾರಿ ಘಟನೆಗಳನ್ನು ನಾವು ಕಾಣಬಹುದು.

ಉಷಾದೇವಿ ತುಂಬ ಭಕ್ತಿಮತಿಯಾಗಿದ್ದಳು. ಪೂಜೆಗೆ ಹೇಗೆ ನೈವೇದ್ಯವನ್ನು ತಯಾರಿಸುತ್ತಾರೋ ಹಾಗೆಯೇ ಸ್ವಾಮೀಜಿಯವರಿಗೆ ಮಾಡುವ ಅಡುಗೆಯನ್ನೂ ಅತ್ಯಂತ ಭಕ್ತಿಯಿಂದ ತಯಾರಿಸುತ್ತಿದ್ದಳು. ವಾತ್ಸಲ್ಯಮಯಿ ತಾಯಿಯಂತೆ ಬಡಿಸುತ್ತಿದ್ದಳು. ಸ್ವಾಮೀಜಿಯವರ ಸಲುವಾಗಿ ತರತರದ ಆಹಾರ ಪದಾರ್ಥಗಳನ್ನು ತಯಾರಿಸುತ್ತಿದ್ದಳು. ಪಂಡಿತರ ಕುಟುಂಬದೊಂದಿಗೆ ತಾವೂ ಒಬ್ಬರೇನೋ ಎಂಬಂತೆ ಸ್ವಾಮೀಜಿ ಕೂಡ ಕುಟುಂಬದ ಎಲ್ಲಾ ಸದಸ್ಯರೊಂದಿಗೆ ಸಲಿಗೆಯಿಂದ ವ್ಯವಹರಿಸುತ್ತಿದ್ದರು. ತಮಗೆ ಇಷ್ಟವಾಗುತ್ತಿದ್ದ ಎಷ್ಟೋ ಅಡುಗೆಯ ಪದಾರ್ಥಗಳನ್ನು ಅಡುಗೆ ಮನೆಯಲ್ಲಿ ತಾವೇ ತಯಾರಿಸುವುದಲ್ಲದೆ ಅದನ್ನು ಹೇಗೆ ತಯಾರಿಸಬೇಕು ಎಂದು ಕೂಡ ಉಷಾದೇವಿಗೆ ಕಲಿಸಿಕೊಡುತ್ತಿದ್ದರು. ಶುದ್ಧ ಶಾಖಾಹಾರಿಗಳಾಗಿದ್ದ ಪಾಂಡುರಂಗರ ಕುಟಂಬದವರಿಗೆಲ್ಲ ಹಲಸಿನ ಕಾಯಿಯ ಸಾಂಬಾರು, ಬಾಳೇಕಾಯಿಯ ಗೊಜ್ಜು (banana chop curry), ಆಲೂಗಡ್ಡೆಯ ಸಾರು ಹಾಗೂ ಪಡುವಲಕಾಯಿಯ ಪಲ್ಯಗಳನ್ನು ಮಾಡಿ ಅವರಿಗೆಲ್ಲ ಬಂಗಾಳದ ಹೊಸ ರುಚಿಗಳನ್ನು ಉಣಬಡಿಸಿದರು. 'ಢೋಕಾ'(Dhoka) ಎನ್ನುವುದೊಂದು ಸ್ವಾಮೀಜಿ ತುಂಬಾ ಇಷ್ಟಪಡುತ್ತಿದ್ದ ತಿಂಡಿಯಾಗಿತ್ತು.(ಢೋಕಾ ಎಂದರೆ ಕಡಲೆಬೇಳೆಯನ್ನು ನಾಲ್ಕೈದು ಗಂಟೆಗಳ ಕಾಲ ನೆನೆಸಿ, ಅದಕ್ಕೆ ಹಸಿಮೆಣಸಿನಕಾಯಿ, ಹಸಿಶುಂಠಿ, ಉಪ್ಪುಗಳೇ ಮೊದಲಾದವನ್ನು ಸೇರಿಸಿ ತಟ್ಟೆಗೆ ಹಾಕಿ ಬೇಯಿಸಿಕೊಂಡು, ಸಣ್ಣ ಸಣ್ಣ ಚೌಕಗಳನ್ನಾಗಿ ಕತ್ತರಿಸುತ್ತಾರೆ. ನಂತರ ಇವುಗಳನ್ನು ಎಣ್ಣೆಯಲ್ಲಿ ಕರಿಯಲಾಗುತ್ತದೆ. ಇದನ್ನು ಸಾಮನ್ಯವಾಗಿ ಟೊಮೋಟೋ ಚಟ್ನಿಯ ಜೊತೆಗೆ ಸೇವಿಸುತ್ತಾರೆ.)

ಪಾಂಡುರಂಗರ ಹೆಂಡತಿ ಹಾಗೂ ಮಕ್ಕಳಿಗೆಲ್ಲಾ ಈ ಶಾಖಾಹಾರಿ ಬಂಗಾಳಿ ಪದಾರ್ಥಗಳು ತುಂಬಾ ಇಷ್ಟವಾಗುತ್ತಿದ್ದವು. ಉಷಾದೇವಿ ಇವನ್ನೆಲ್ಲ ತಯಾರು ಮಾಡುವುದನ್ನೂ ಚೆನ್ನಾಗಿ ಕಲಿತುಕೊಂಡಳು.


ಸ್ವಾಮೀಜಿ ಕೆಲವೊಮ್ಮೆ ಭಜನೆ ಹಾಡುತ್ತಿದ್ದರು. ''ನೀವೂ ನನ್ನೊಂದಿಗೆ ಹಾಡಬೇಕು'' ಎಂದು ತಾರಾ, ಕ್ಷಮಾ ಭದ್ರಾರಿಗೂ ಹೇಳುತ್ತಿದ್ದರು. ಎಲ್ಲ ವಿದ್ಯೆಗಳ ಬಗ್ಗೆ ಜ್ಞಾನ ಬೆಳೆಸಿಕೊಳ್ಳಿ ಎಂದು ಪಾಂಡುರಂಗರ ಮಕ್ಕಳಿಗೆ ಸಲಹೆ ನೀಡಿದ್ದರು. ಅವರ ಮಾತುಗಳು ಐದು ಜನ ಮಕ್ಕಳಿಗೂ ಸದಾ ಸ್ಫೂರ್ತಿಯಂತೆ ಅವರ ಮನದಾಳದಲ್ಲಿ ನೆಲೆಸಿ, ಅವರೆಲ್ಲಾ ಸುಂದರ ಬದುಕುಗಳನ್ನು ಕಟ್ಟಿಕೊಳ್ಳಲು ನೆರವಾದವು.

ಸಾಯಂಕಾಲದ ವೇಳೆಯಲ್ಲಿ ಸ್ವಾಮೀಜಿ ಪಾಂಡುರಂಗರೊಂದಿಗೆ ಸಮುದ್ರದ ತೀರಕ್ಕೆ ಮಕ್ಕಳೊಂದಿಗೆ ಕುದುರೆಗಾಡಿಯಲ್ಲಿ ಹೋಗುತ್ತಿದ್ದರು. ಮಾಧವ ಮತ್ತು ವಾಮನರನ್ನು ಹೆಗಲ ಮೇಲೆ ಕೂಡಿಸಿಕೊಂಡು ನೀರಿಗಿಳಿದು ಸ್ವಾಮೀಜಿ ಅವರಿಗೆ ಈಜುವುದನ್ನು ಕಲಿಸಿಕೊಡುತ್ತಿದ್ದರು. ಮರಳಿನಲ್ಲಿ ಮನೆ ನಿರ್ಮಿಸಿ, ಅದರ ಸುತ್ತಲೂ ಹಾಡುತ್ತ, ಕುಣಿಯುತ್ತ ಆಟವಾಡುತ್ತಿದ್ದ ಹೆಣ್ಣು ಮಕ್ಕಳೊಂದಿಗೆ (ತಾರಾ, ಭದ್ರ, ಹಾಗೂ ಕ್ಷಮಾ) ತಾವೂ ಹಾಡಿ ನಲಿಯುತ್ತಿದ್ದ ಸ್ವಾಮೀಜಿ, ಒಂದು ಪುಟ್ಟ ಮಗುವೇ ಆಗಿಬಿಡುತ್ತಿದ್ದರು. ಮನೆಗೆ ಬಂದಮೇಲೆ ಪಾಂಡುರಂಗರ ಶ್ರೀಮತಿ ಉಷಾದೇವಿಗೆ ಅಡುಗೆ ಮಾಡಲು ಸಹಕರಿಸುತ್ತಿದ್ದರು.

ಒಟ್ಟಾರೆ ಸ್ವಾಮಿ ವಿವೇಕಾನಂದರು ಪೋರ್‌ಬಂದರಿನಲ್ಲಿ ಸುಮಾರು ನಾಲ್ಕು ತಿಂಗಳುಗಳ ಕಾಲ ವಾಸಮಾಡಿದರು. ತಮ್ಮ ವಾಸ್ತವ್ಯದ ಬಹಳಷ್ಟು ದಿನಗಳನ್ನು ಶಂಕರ ಪಾಂಡುರಂಗ ಪಂಡಿತರ 'ಭೋಜೇಶ್ವರ ಬಂಗಲೆ'ಯಲ್ಲಿ ಕಳೆದರು.

ಸ್ವಾಮೀಜಿಯವರ ನೇರಸಂಪರ್ಕಕ್ಕೆ ಬರುವ ಸುಯೋಗವನ್ನು ಪಡೆದಿದ್ದ ಉಷಾದೇವಿ ೧೯೩೮ರ ಇಸವಿಯಲ್ಲಿ ತನ್ನ ಇಹಲೋಕ ಯಾತ್ರೆಯನ್ನು ಮುಗಿಸಿದಳು. ✸

**ಯುವಚೇತನ**



## ಶಾಸ್ತ್ರ ಮತ್ತು ಗುರು

ಜೀವನ ಮತ್ತು ಧರ್ಮ ಯಾವುದಾದರೂ ಗ್ರಂಥದ ಮೇಲೆ, ಯಾವುದಾದರೂ ಪ್ರವಾದಿಯ ಮೇಲೆ ನಿಂತಿರುವುದಾದರೆ, ಆಗ ಧರ್ಮವೂ, ಗ್ರಂಥಗಳೂ ನಾಶವಾಗಲಿ! ಧರ್ಮ ನಮ್ಮಲ್ಲಿರುವುದು. ಗುರುಗಳಾಗಲಿ, ಗ್ರಂಥಗಳಾಗಲೀ ಅದನ್ನು ನಾವು ಪಡೆಯುವುದಕ್ಕೆ ಸಹಾಯ ಮಾಡುವರು, ಅಷ್ಟೆ. ಅವುಗಳಾವುವೂ ಇಲ್ಲದೇ ಇದ್ದರೂ ನಮ್ಮ ಹೃದಯದ ಅಂತರಾಳದಿಂದಲೇ ಸತ್ಯವನ್ನೆಲ್ಲಾ ಪಡೆಯಬಹುದು. ಆದರೂ ಗುರುಗಳಿಗೆ ಮತ್ತು ಗ್ರಂಥಗಳಿಗೆ, ಅವರ ದಾಸರಾಗದೆ, ಕೃತಜ್ಞತೆಯನ್ನು ತೋರಿ. ನಿಮ್ಮ ಗುರುವನ್ನು ದೇವರಂತೆ ಪೂಜಿಸಿ, ಆದರೆ ವಿಚಾರ ಮಾಡದೆ ಅವನು ಹೇಳುವುದನ್ನೆಲ್ಲಾ ಒಪ್ಪಿಕೊಳ್ಳಬೇಡಿ. ನಿಮಗೆ ಸಾಧ್ಯವಾದಷ್ಟೂ ಅವರನ್ನು ಪ್ರೀತಿಸಿ. ಆದರೆ ನೀವು ವಿಚಾರ ಮಾಡುವುದನ್ನು ಬಿಡಬೇಡಿ. ಯಾವ ಅಂಧ ಶ್ರದ್ಧೆಯೂ ನಿಮ್ಮನ್ನು ಉದ್ಧಾರಮಾಡಲಾರದು. ನಿಮ್ಮನ್ನು ನೀವೇ ಉದ್ಧಾರ ಮಾಡಿಕೊಳ್ಳಬೇಕಾಗಿದೆ. ದೇವರ ಒಂದು ಭಾವನೆಯನ್ನು ಯಾವಾಗಲೂ ನೆನಪಿನಲ್ಲಿಡಿ – ಅದೇ ಅವನು ನಮ್ಮ ಸಹಾಯಕನೆಂಬುದು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪು. ೩೩೫)*